**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ/27/ಗ.ಕೋಶ/2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:30.06.2015.

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
**ಬೆಂಗಳೂರು-01.**

**ಇವರಿಗೆ:**
ರಾಜ್ಯದ ಎಲ್ಲ ಗ್ರಾಮ ಪಂಚಾಯತ್‌ನ
ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

**ಮಾನ್ಯರೇ,**

**ವಿಷಯ: ಡಿಜಿಟಲ್ ಇಂಡಿಯಾ ಸಪ್ತಾಹ ಆಚರಣೆ.**

******

ಡಿಜಿಟಲ್ ಇಂಡಿಯಾ ಸಪ್ತಾಹವನ್ನು ಜುಲೈ 01, 2015 ರಿಂದ ಜುಲೈ 07, 2015 ರವರೆಗೆ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ಉದ್ದೇಶಗಳು ಕೆಳಕಂಡಂತಿವೆ.

- ಇಂಟರ್‌ನೆಟ್ ಸಂಪರ್ಕ ನಿರ್ವಹಣೆ
- ನಾಗರಿಕರಿಗೆ ಸೇವೆಯ ಸವಲತ್ತು (ಇ-ಸೇವೆಗಳು)
- ನಾಗರಿಕರ ಡಿಜಿಟಲ್ ಸಬಲೀಕರಣ

ಈ ಡಿಜಿಟಲ್ ಸಪ್ತಾಹದಲ್ಲಿ ನಮ್ಮ ಡಿಜಿಟಲ್ ಸಾಧನೆಗಳಾದ ಪಂಚತಂತ್ರ, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ ಮತ್ತು ಸಕಾಲ ಸೇವೆಗಳ ಕುರಿತು ಮಾಹಿತಿಯನ್ನು ನಾಗರಿಕರಿಗೆ ನೀಡಬೇಕು. ಈ ಸಪ್ತಾಹದ ಅಂಗವಾಗಿ ಕೆಳಗಿನ ಚಟುವಟಿಕೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಸಬೇಕು.

**ವಿಶೇಷ ಗ್ರಾಮ ಸಭೆ-ಡಿಜಿಟಲ್ ಇಂಡಿಯಾ ಮತ್ತು ಇ-ಪಂಚಾಯತ್**

- ಇಂಟರ್ನೆಟ್ ಸಂಪರ್ಕ ನಿರ್ವಹಿಸುವುದು
- ಬಯೋಮೆಟ್ರಿಕ್ ಹಾಜರಾತಿ ಪ್ರವೇಶ ಖಾತರಿ
- ಪಂಚತಂತ್ರ ಮತ್ತು ಗಾಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ದತ್ತಾಂಶಗಳನ್ನು ಆರೋಹಿಸುವುದು.
- ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಲಭ್ಯವಿರುವ ಇ-ಸೇವೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

**ಪಂಚಾಯತ್ ವೆಬ್‌ಸೈಟ್ ವಿವರಗಳ updation**

- ಗ್ರಾಮ ಪಂಚಾಯತಿ ಸಾಮಾನ್ಯ ಮಾಹಿತಿ
- ಸೇವೆಗಳು
- ಯೋಜನೆಗಳು
- ಕಾಮಗಾರಿಗಳು
- ಫಲಾನುಭವಿಗಳು
- ಸಾಮಾನ್ಯ ಮಾಹಿತಿ
- ಸಭಾ ನಡವಳಿಗಳು
- ಆಸ್ತಿ ತೆರಿಗೆ
- ಆಯವ್ಯಯ ಇತ್ಯಾದಿ

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆ/ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮದ ಮೇಲ್ವಿಚಾರಣೆ ಮಾಡುವುದು ಹಾಗೂ ಯಶಸ್ವಿಯಾಗಿ ಡಿಜಿಟಲ್ ಇಂಡಿಯಾ ಸಪ್ತಾಹ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕೋರಿದೆ. ಇ-ಆಡಳಿತ ಕಾರ್ಯಕ್ರಮವನ್ನು ಉತ್ತಮವಾಗಿ ಅನುಷ್ಠಾನಗೊಳಿಸುವ ಗ್ರಾಮ ಪಂಚಾಯತಿಗಳಿಗೆ ಪುರಸ್ಕಾರ ನೀಡುವ ಪ್ರಸ್ತಾವನೆಯಿದ್ದು, ವಿವರಗಳನ್ನು ನಂತರ ತಿಳಿಸಲಾಗುವುದು

30/6/15

(ಕೆ. ಯಾಲಕ್ಕಿಗೌಡ)
ನಿರ್ದೇಶಕರು(ಪಂ.ರಾಜ್-I) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ – ಡಿಜಿಟಲ್ ಇಂಡಿಯಾ ಸಪ್ತಾಹವನ್ನು ಯಶಸ್ವಿಯಾಗಿ ಮಾಡಲು ಅಗತ್ಯ ಕ್ರಮವನ್ನು ಕೈಗೊಳ್ಳಲು ತಿಳಿಸಿದೆ.

e:\d.k - 2015\digital india week.docx